**OS 343/2021- DW-2**

ದಿನಾಂಕಃ **25.09.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

DW-2 ರವರ ಪಾಟೀಸವಾಲು ವಾದಿ ಪರ ಶ್ರೀ ಎನ್ ಬಿ ಜಿ ವಕೀಲರಿಂದ

ದಾವಾ ಸ್ವತ್ತಿನ ಸರ್ವೆ ಸಂಖ್ಯೆ **60/3.** ಸದರಿ ಸ್ವತ್ತಿನ ಚಕ್ಕುಬಂದಿ - ಪೂರ್ವಕ್ಕೆ - ನನ್ನ ಜಮೀನು, ಪಶ್ಚಿಮಕ್ಕೆ - ನಿಂಗಮ್ಮರವರ ಜಮೀನು, ಉತ್ತರಕ್ಕೆ - ನಿಂಗಮ್ಮರವರ ಜಮೀನು, ದಕ್ಷಿಣಕ್ಕೆ - ನಿಂಗಮ್ಮ ರವರ ಜಮೀನು. ದಾವಾ ಸ್ವತ್ತಿನ ಉತ್ತರಕ್ಕೆ - ರೈಲ್ವೆ ರಸ್ತೆ ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ - ಗಿಡ್ಡಿ ಮಾದೇಗೌಡರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಲಿಂಗೇಗೌಡ ರವರು ಮರಿಚೆನ್ನಮ್ಮ ಉಃ ಚಿಕ್ಕತಾಯಮ್ಮ ರವರಿಂದ **10.10.1949** ರಲ್ಲಿ ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರದ ಆಧಾರದ ಮೇಲೆ ಪಹಣಿ ಪತ್ರಿಕೆಯು ಲಿಂಗೇಗೌಡರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಜಯಮ್ಮ ರವರ ಗಂಡನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಜಯಮ್ಮರವರ ಗಂಡ ದಾವಾ ಸ್ವತ್ತಿನ ಆಧಾರದ ಮೇಲೆ ಸಾಲವನ್ನು ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಜಯಮ್ಮ ರವರ ಗಂಡ **04.11.2019** ರಂದು ಮೃತಪಟ್ಟಿರುತ್ತಾರೆಂದರೆ ಸರಿ. ಮೃತಪಟ್ಟ ನಂತರ ಅವರ ವಾರಸುದಾರರು ಜಮೀನಿನ ಸಾಗುವಳಿ ಮಾಡುತ್ತಿದ್ದಾರೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಹಣಿ ಪತ್ರಿಕೆಯನ್ನು ನಾನು ನೋಡಿರುವುದಿಲ್ಲ.

ದಾವಾ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನದಲ್ಲಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗೆ ಯಾವ ರೀತಿ ಬಂದಿರುತ್ತದೆ ಎಂದು ದಾವಾ ಸ್ವತ್ತಿನ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

ಮರು ವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.
ಸಾ.ಓ.ಹೇ.ಸ. ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಪಾಂಡವಪುರ.